<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ**,** ಗುಬ್ಬಿ</u>

ಓ ಎಸ್ ನಂ**. 127/2013** ಪಿ **.**ಡಬ್ಲ್ಯೂ**: 1**

<u>ದಿನಾಂಕ**: 06.02.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**</u>

<u>ಮುಂದುವರಿದ ಪಾಟೀ ಸವಾಲು**: 7** ನೇ ಪ್ರತಿವಾದಿ ಪರ ಶ್ರೀ**. CRB** ವಕೀಲರಿಂದ**:**</u>

3 ನೇ ಪ್ರತಿವಾದಿಗೆ 5 ಜನ ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಗೆ 6, 7 ನೇ ಪ್ರತಿವಾದಿಗಳು, ಜಯಬಸವರಾಜು, ಸದಾನಂದಮೂರ್ತಿ ಮತ್ತು ಎಸ್ ಚನ್ನಬಸವಣ್ಣ ಎಂಬ 5 ಜನ ಗಂಡು ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯವರು ದಿಃ 17.12.1987 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಗೆ ನಾಗರತ್ನ ಎಂಬ ಒಬ್ಬಳು ಹೆಣ್ಣು ಮಗಳಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ತಮ್ಮ ಜೀವಿತ ಕಾಲದಲ್ಲಿ ದಾವಾ ಸ್ವತ್ತು ಐಟಂ ನಂ.3 ನ್ನು ಖರೀದಿಸಿರುತ್ತಾರೆ. ಅವರ ಮರಣಾನಂತರ ಅವರ ಮಕ್ಕಳು ಜಂಟಿ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ.3 ರ ಸ್ವಾಧೀನಾನುಭವದಲ್ಲಿ 3 ನೇ ಪ್ರತಿವಾದಿಯ ಮಕ್ಕಳಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ದಾವಾ ಸ್ವತ್ತು ಐಟಂ ನಂ.3 ನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎನ್ನುತ್ತಾರೆ. 3 ನೇ ಪ್ರತಿವಾದಿಯ ಮಗ ಚನ್ನಬಸವಣ್ಣ ರವರು ವಿಧಾನ ಪರಿಷತ್ ಸದಸ್ಯರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಈಗ್ಗೆ 15 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚನ್ನಬಸವಣ್ಣ ರವರಿಗೆ ವಿಶ್ವಾಸ ಮತ್ತು ವಿಕಾಸ್ ಎಂಬ ಇಬ್ಬರು ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಮಕ್ಕಳು ಮತ್ತು ಚನ್ನಬಸವಣ್ಣ ರವರ ಮಕ್ಕಳು ಎಲ್ಲರೂ ಸೇರಿ ದಾವಾ ಸ್ವತ್ತು ಐಟಂ ನಂ.3 ರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.3 ರ ಖಾತೆ ಮತ್ತು ಪಹಣಿ 3 ನೇ ಪ್ರತಿವಾದಿಯ ಮಕ್ಕಳು ಮತ್ತು

ಮೊಮ್ಮಕ್ಕಳ ಹೆಸರಿನಲ್ಲಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು, ಈ ವಿಚಾರ ತಿಳಿದ ನಂತರ ನಾನು ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಸ್ವತ್ತು ಐಟಂ ನಂ.3 ರ ಪೂರ್ವಕ್ಕೆ - 7 ನೇ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಪಶ್ಚಿಮಕ್ಕೆ ಸಹ 7 ನೇ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉತ್ತರಕ್ಕೆ ಕೆರೆ ಅಂಗಳ ಮತ್ತು ಹುಚ್ಚಮ್ಮರವರ ಜಮೀನು ಇದೆ ಎಂದರೆ ಸಾಕ್ಷಿ ಕೆರೆ ಅಂಗಳ ಇರುತ್ತದೆ ಎನ್ನುತ್ತಾರೆ. ದಕ್ಷಿಣಕ್ಕೆ ಈಗ ಕರಿಯಣ್ಣ ರವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಕದುರಪ್ಪ ಮತ್ತು ಅವರ ಸಹೋದರ ನರಸಪ್ಪ ರವರು ಸೇರಿ 1964 -65 ನೇ ಇಸವಿಯಲ್ಲಿ ದಾವಾ ಸ್ವತ್ತು ಐಟಂ ನಂ.3 ನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನರಸಪ್ಪ ರವರು ಮಾರಾಟ ಮಾಡಿರಬಹುದು ಆದರೆ ನನ್ನ ತಂದೆ ಮಾರಾಟ ಮಾಡಿರುವುದಿಲ್ಲ ಎನ್ನುತ್ತಾರೆ. 3 ನೇ ಪ್ರತಿವಾದಿಯ ಹೆಸರಿನಲ್ಲಿರುವ ದಾವಾ ಸ್ವತ್ತು ಐಟಂ ನಂ.3 ರ ಖಾತೆ ಮತ್ತು ಪಹಣಿಯ ವಿರುದ್ಧ ನಾನು ರೆವೆನ್ಯೂ ನ್ಯಾಯಾಲಯಗಳಲ್ಲಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತು ಐಟಂ ನಂ.3 ಕ್ಕೂ ನನಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **4(a)**ನೇ ಪ್ರತಿವಾದಿ ಪರ ಶ್ರೀ**. HMA** ವಕೀಲರಿಂದಃ

ನನ್ನ ತಂದೆಯ ಹೆಸರು ಕದರಯ್ಯ.ನಾನು ಕದರಯ್ಯ ರವರ ಮಗಳು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಕದರಯ್ಯನ ಮಗಳೇ ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.4 ಕದರಯ್ಯ ರವರಿಗೆ ಅವರ ತಂದೆಯಿಂದ ಬಂದಿರುತ್ತದೆ. ನನ್ನ ತಂದೆ ಅವರ ಕುಟುಂಬದ ಜಮೀನನ್ನು ಯಾರಿಗೂ ಮಾರಿರುವುದಿಲ್ಲ. ದಿಃ 12.08.1968 ರಲ್ಲಿ ಕದರಯ್ಯ ರವರು 4 ನೇ ಪ್ರತಿವಾದಿ ಜಿ.ಡಿ ಬಸವರಾಜಯ್ಯ ಬಿನ್ ದೇವಯ್ಯ ಎನ್ನುವವರಿಗೆ ದಾವಾ ಸ್ವತ್ತು ಐಟಂ ನಂ.4 ರಲ್ಲಿ 1 ಎಕರೆ 18 1/2 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಹಿಂದೆ ಕದರಯ್ಯ

ರವರು ದಾವಾ ಸ್ವತ್ತು ಐಟಂ ನಂ.4 ರಲ್ಲಿ 1 ಎಕರೆ 6 1/2 ಗುಂಟೆ ಯನ್ನು ಜಿ.ಕೃಷ್ಣಮೂರ್ತಿ ಬಿನ್ ವೆಂಕಟನರಸಯ್ಯ ರವರಿಗೆ ಮಾರಾಟ ಮಾಡಿದ್ದರು ಅವರಿಂದ ದಿಃ 16.08.1968 ರ ಕ್ರಯಪತ್ರದ ಮುಖಾಂತರ 4 ನೇ ಪ್ರತಿವಾದಿ ಸದರಿ 1 ಎಕರೆ 6 1/2 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಕದರಯ್ಯ ರವರು ಯಾರಿಗೂ ದಾವಾ ಸ್ವತ್ತು ಐಟಂ ನಂ.4 ನ್ನು ಮಾರಾಟ ಮಾಡಿರುವುದಿಲ್ಲ ಎನ್ನುತ್ತಾರೆ. ಈ ಹಿಂದೆ ಕದರಯ್ಯ ರವರು ದಾವಾ ಸ್ವತ್ತು ಐಟಂ ನಂ.4 ರಲ್ಲಿ 12 ಗುಂಟೆ ಜಮೀನನ್ನು ಗಂಗಣ್ಣ ಬಿನ್ ಒಗ್ಗಯ್ಯ ರವರಿಗೆ ಮಾರಾಟ ಮಾಡಿದ್ದರು ಅವರಿಂದ ದಿಃ 12.05.1969 ರ ಕ್ರಯಪತ್ರದ ಮುಖಾಂತರ 4 ನೇ ಪ್ರತಿವಾದಿ ಸದರಿ 12 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಕದರಯ್ಯ ರವರು ಯಾರಿಗೂ ದಾವಾ ಸ್ವತ್ತು ಐಟಂ ನಂ.4 ನ್ನು ಮಾರಾಟ ಮಾಡಿರುವುದಿಲ್ಲ ಎನ್ನುತ್ತಾರೆ. ಕದರಯ್ಯ ರವರು ದಾವಾ ಸ್ವತ್ತು ಐಟಂ ನಂ.4 ನ್ನು ಮಾರಾಟ ಮಾಡಿದ ವ್ಯಕ್ತಿಗಳಾದ ಕೃಷ್ಣಮೂರ್ತಿ ಮತ್ತು ಗಂಗಣ್ಣ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಕದರಯ್ಯ ರವರ ಆಸ್ತಿಯ ಬಗ್ಗ ಮಾತ್ರ ನನಗೆ ಗೊತ್ತು ಉಳಿದ ವಿಚಾರಗಳು ನನಗೆ ಗೊತ್ತಿಲ್ಲ ಎನ್ನುತ್ತಾರೆ. 1968 ರಲ್ಲಿ 4 ನೇ ಪ್ರತಿವಾದಿಗೆ ದಾವಾ ಸ್ವತ್ತು ಐಟಂ ನಂ.4 ನ್ನು ಮಾರಾಟ ಮಾಡುವಾಗ ಕದರಯ್ಯ ರವರು ರುದ್ರಯ್ಯ ಎನ್ನುವವರಿಂದ ಮಾಡಿದ್ದ ಸಾಲವನ್ನು ತೀರಿಸಲು ಸದರಿ ಜಮೀನನ್ನು ಮಾರಾಟ ಮಾಡಿರುವುದಾಗಿ ಕ್ರಯಪತ್ರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. 1968 ರಲ್ಲಿ ನನಗೆ ಸುಮಾರು 10 ವರ್ಷ ವಯಸ್ಸಾಗಿತ್ತು.

ಕದುರಪ್ಪ ರವರು ದಾವಾ ಸ್ವತ್ತು ಐಟಂ ನಂ.4 ನ್ನು ಮಾರಾಟ ಮಾಡಿರುವ ಕ್ರಯಪತ್ರಗಳನ್ನು ನಾನು ನೋಡಿರುವುದಿಲ್ಲ. 4 ನೇ ಪ್ರತಿವಾದಿ ದಾವಾ ಸ್ವತ್ತು ಐಟಂ ನಂ.4 ನ್ನು ಕೊಂಡ ನಂತರ ಅದರ ಖಾತೆ ಮತ್ತು ಪಹಣಿಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡು ಅದರ ಅನುಭವದಲ್ಲಿರುತ್ತಾರೆ ಎಂದರೆ ಸಾಕ್ಷಿ ಈ ವಿಚಾರ ತಿಳಿದ ನಂತರ ನಾನು ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ.

ದಿಃ 16.5.2016 ರಂದು 4 ನೇ ಪ್ರತಿವಾದಿ ತನ್ನ ಮಗ ಪ್ರತಿವಾದಿ 4(a)ರವರಿಗೆ ದಾವಾ ಸ್ವತ್ತುಐಟಂ ನಂ.4 ನ್ನು ನೊಂದಾಯಿತ ದಾನ ಪತ್ರದ ಮುಖಾಂತರ ದಾನ

ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರ ಆಧಾರದ ಮೇಲೆ ಪ್ರತಿವಾದಿ 4(ಎ) ರವರು ದಾವಾ ಸ್ವತ್ತು ಐಟಂ ನಂ.4 ರ ಖಾತೆ ಮತ್ತು ಪಹಣಿಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡು ಅದರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.4 ಕ್ಕೆ ಪ್ರತಿವಾದಿ 4(ಎ) ರವರೇ ಮಾಲೀಕರಾಗಿದ್ದು ಅದರ ಸ್ವಾಧೀನದಲ್ಲಿ ಸಹ ಅವರೇ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.4 ರ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿ 4 ರವರ ಹೆಸರು ಈಗಲೂ ಸಹ ಬರುತ್ತಿದೆ ಎಂದರೆ ಸಾಕ್ಷಿ ಆ ವಿಚಾರ ತಿಳಿದ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ.  ದಾವಾ ಸ್ವತ್ತು ಐಟಂ ನಂ.4 ರ ಪಹಣಿ ಪತ್ರಿಕೆಗಳು 4 ನೇ ಪ್ರತಿವಾದಿಯ ಹೆಸರಿಗೆ ಹೇಗೆ ಬಂದಿತು ಎಂದು ತಿಳಿದುಕೊಳ್ಳಲು ನಾನು ಯಾವುದೇ ಕ್ರಯಪತ್ರಗಳನ್ನು  ಪಡೆದುಕೊಂಡಿರುವುದಿಲ್ಲ. 4 ನೇ ಪ್ರತಿವಾದಿ ಅಥವಾ ಪ್ರತಿವಾದಿ 4(ಎ) ರವರ ಹೆಸರಿನಲ್ಲಿರುವ ದಾವಾ ಸ್ವತ್ತು ಐಟಂ ನಂ.4 ರ ಖಾತೆ ಮತ್ತು ಪಹಣಿಯ ವಿರುದ್ಧ ನಾನು ರೆವೆನ್ಯೂ ನ್ಯಾಯಾಲಯಗಳಲ್ಲಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ದಾವಾ ಸ್ವತ್ತುಗಳು ಇರುವ ಗ್ರಾಮದಲ್ಲಿ ನಾನು ಅಥವಾ ಇತರೆ ವಾದಿಗಳು ವಾಸವಿರುವುದಿಲ್ಲ ಎಂದರೆ ಸರಿ. 1968 ರಿಂದ 2016 ರವರೆಗೆ 4 ನೇಪ್ರತಿವಾದಿ ದಾವಾ ಸ್ವತ್ತು ಐಟಂ ನಂ.4 ರ ಮಾಲೀಕರಾಗಿ ಅದರ ಅನುಭವದಲ್ಲಿದ್ದು 2016 ರಿಂದ ಈಗಿನವರೆಗೆ ಪ್ರತಿವಾದಿ 4(ಎ) ರವರು ದಾವಾ ಸ್ವತ್ತು ಐಟಂ ನಂ.4 ರ ಮಾಲೀಕರಾಗಿ ಅದರ ಅನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಕದುರಪ್ಪರವರ ಕುಟುಂಬಕ್ಕೆ ಮತ್ತುದಾವಾ ಸ್ವತ್ತು ಐಟಂ ನಂ.4 ಕ್ಕೆ ಯಾವುದೇ ಸಂಬಂಧ ಇರುವುದಿಲ್ಲಎಂದರೆ ಸರಿಯಲ್ಲ. ಪ್ರತಿವಾದಿ 4 ಮತ್ತು 4(ಎ) ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ನನಗೂ ಕದುರಪ್ಪ ರವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಜಮೀನನ್ನು ಮಾರಾಟ ಮಾಡಿದ ನಂತರ ಮಾರಾಟ ಮಾಡಿದವರಿಗೆ ಅದರ ಮೇಲೆ ಅಧಿಕಾರ ಅಥವಾ ಹಕ್ಕು ಇರುವುದಿಲ್ಲ ಎಂದರೆ ಸರಿ.   ನಾನು ಕದುರಪ್ಪ ರವರ ಮಗಳಲ್ಲ ಮತ್ತು ದಾವಾ ಸ್ವತ್ತು ಐಟಂ ನಂ.4 ರವರಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು  ದಾವಾ ಸ್ವತ್ತು ಐಟಂ ನಂ.4 ರಲ್ಲಿ

ಎಂದಿಗೂ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.4 ರ ಚಕ್ಕುಬಂದಿ ನಾನು ಅವಿದ್ಯಾವಂತರಾಗಿರುವುದರಿಂದ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಐಟಂ ನಂ.4 ರ ಚಕ್ಕುಬಂದಿ ಬಗ್ಗೆ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಸ್ವತ್ತು ಐಟಂ ನಂ.4 ನ್ನು ನಾನು ಈವರೆಗೆ ನೋಡಿರುವುದಿಲ್ಲ, ಅದು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಮತ್ತು ಅದರ ಚಕ್ಕುಬಂದಿ ಗೊತ್ತಿಲ್ಲದೇ ಇದ್ದರೂ ಸುಳ್ಳು ದಾವೆಯನ್ನು ಹೂಡಿ ಪ್ರತಿವಾದಿ 4 ರವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. 1968 ರ ಕ್ರಯಪತ್ರಗಳು ಅಥವಾ 2016 ರ ದಾನಪತ್ರವನ್ನು ರದ್ದುಪಡಿಸಲು ಯಾವುದಾದರೂ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಅದರ ಅಗತ್ಯ ನನಗಿಲ್ಲ ಎನ್ನುತ್ತಾರೆ. ನನಗೂ ದಾವಾ ಸ್ವತ್ತು ಐಟಂ ನಂ.4 ಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲದೇ ಇದ್ದರಿಂದ ರದ್ದುಪಡಿಸಲು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ , ಗುಬ್ಬಿ.